ಕರ್ನಾಟಕ ವಿಧಾನಸಭೆ

ಬುಧವಾರ 2ನೇ ಫೆಬ್ರವರಿ 2005 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 22 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ

ಪೀಠವನ್ನು ಅಲಂಕರಿಸಿದ್ದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ.

ಅ. ಸದನದಲ್ಲಿ ಸದಸ್ಯರ ಹಾಜರಾತಿಯ ಬಗ್ಗೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ತಾವು ನಿನ್ನೆ ದಿವಸ ಬೆಳಿಗ್ಗೆ 9 ಗಂಟೆಗೆ ಅಸೆಂಬ್ಲಿಯನ್ನು ಕರೆದಿದ್ದಿರಿ, ನಿನ್ನೆ ಸಹ 9 ಗಂಟೆಗೆ ಅಸೆಂಬ್ಲಿಯನ್ನು ಕರೆದಿದ್ದರೆ ಯಾರೂ ಇರುತ್ತಿರಲಿಲ್ಲ. ಇವತ್ತು ಸಹ ಪರಿಸ್ಥಿತಿ ಹೇಗೆ ಇದೆಯೆಂಬುದನ್ನು ನೋಡಿ. ತಾವು ಇದಕ್ಕೆ ಏನಾದರೂ ಒಂದು ಕಡಿವಾಣವನ್ನು ಹಾಕಬೇಕು. ಇದು ಅನಿವಾರ್ಯ, ಇಲ್ಲದಿದ್ದರೆ ಅಸೆಂಬ್ಲಿಯಲ್ಲಿ ಮಾತನಾಡುವವರಿಗೆ, ಕೇಳುವವರಿಗೆ, ಸ್ಫೂರ್ತಿಬರುವುದಿಲ್ಲ. ತಾವು ಇದಕ್ಕೆ ಏನಾದರೂ ಒಂದು ಕ್ರಮವನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಈಗ ಎಲ್ಲಾ ಪಕ್ಷದ ನಾಯಕರು ಇಲ್ಲಿ ಇದ್ದೀರಿ, ಮುಖ್ಯ ಸಚೇತಕರು ಇದ್ದೀರಿ. ಈಗ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾಳೆಯಿಂದ ಬೆಳಿಗ್ಗೆ 9 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ಸಭೆಯನ್ನು ನಡೆಸಬೇಕೆಂದು ತೀರ್ಮಾನವಾಗಿದೆ. ಇದಕ್ಕೆ ಸಂಬಂಧಪಟ್ಟಂತಹ ಎಲ್ಲಾ ಪಕ್ಷದ ಮುಖ್ಯ ಸಚೇತಕರು, ಸಾಕಷ್ಟು ಸದಸ್ಯರುಗಳು ಸದನಕ್ಕೆ ಬರಬೇಕೆಂದು ಹೇಳಿ, ಎಲ್ಲರನ್ನು ಸಭೆಗೆ ಕರೆದುಕೊಂಡು ಬರತಕ್ಕಂಥದ್ದು ಇದಕ್ಕೆ ನೀವು ವ್ಯವಸ್ಥೆ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈ ವಿಷಯ ತೀರ್ಮಾನವಾಗಿದೆ. ಆದರೆ 9 ಗಂಟೆಗೆ ಬರುವಂಥಾದ್ದು ನಿಜಕ್ಕೂ ಕಷ್ಟವಿದೆ.

ಅಧ್ಯಕ್ಷರು : ನೀವು ಬರುವುದಕ್ಕೆ ಆಗದಿದ್ದರೆ, ಬೇರೆಯವರು ಬರುತ್ತಾರೆ ಬಿಡಿ.

ಆ. ಬಾಗಲಕೋಟೆ ಬಿಜಾಪುರ ಜಿಲ್ಲೆಗಳ ಸಮಗ್ರ ನೀರಾವರಿ ಯೋಜನೆ ಪೂರ್ಣಮಾಡಬೇಕೆಂದು ಅಮರಣಾಂತರ ಉಪವಾಸ ಮಾಡುತ್ತಿರುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾವು ನಮ್ಮ ಎಲ್ಲಾ ಶಾಸಕರುಗಳಿಗೂ ಹೇಳುವಂತಹ ಪ್ರಯತ್ನವನ್ನು ಮಾಡುತ್ತೇವೆ. ಇದರಲ್ಲಿ ಇವತ್ತು ಹೆಚ್ಚು ಸದಸ್ಯರುಗಳು ಭಾಗವಹಿಸಬೇಕಾಗಿದೆ. ನಾವು ಬೆಳಿಗ್ಗೆ 9 ಗಂಟೆಯಿಂದ ಸಂಜೆ 7 ಗಂಟೆಯವರೆಗೂ ಕುಳಿತುಕೊಳ್ಳುವಂತಹ ಪ್ರಯತ್ನವನ್ನು ಮಾಡುತ್ತೇವೆ. ನಾನು ಮಾನ್ಯ ವಾಟಾಳ್ ನಾಗರಾಜ್‌ರವರನ್ನು ಜೊತೆಯಲ್ಲೆ ಕರೆದುಕೊಂಡು ಬರುತ್ತೇನೆ. ನಾನು ಭರವಸೆಯನ್ನು ಕೊಡುತ್ತೇನೆ. ಈಗ ಬಹಳ ಮುಖ್ಯವಾಗಿ ತಾವು ಮಾನ್ಯ ಮುಖ್ಯಮಂತ್ರಿಯವರಿಗೆ ಆಲಮಟ್ಟಿಗೆ ಭೇಟಿ ಮಾಡಲು ಹೇಳಿ. ಮಾನ್ಯ ಬಸವನ ಗೌಡರು, ಸಂಸತ್ ಸದಸ್ಯರು ಅವರ ಜೊತೆಗೆ, ಅಲ್ಲಿ ಸಾವಿರಾರು ಜನರು ಅಮರಣಾಂತ ಉಪವಾಸಕ್ಕೆ ಕುಳಿತಿದ್ದಾರೆ. ಅವರ ಅಪೇಕ್ಷೆ ಇರುವಂಥಾದ್ದು, ಹೊಸದಾಗಿ ಏನು